ಇರಬಹುದು, ಮತ್ತೊಂದು ಇರಬಹುದು. ಈ ಕೆ.ವಿ. ಲೈನ್ ಮಾಡದೇ ಹೋದರೆ, ವೋಲ್ಟೇಜ್ ಡ್ರಾಪ್ ಆಗುವುದು ಮತ್ತೊಂದು ಆಗುವುದು, ಇದರಿಂದ ರೈತರಿಗೆ ತೊಂದರೆ ತಪ್ಪುವುದೇ ಇಲ್ಲ. ಅದಕ್ಕಾಗಿ ಅನೇಕ ಕಡೆಗಳಲ್ಲಿ ಈ ಕೆಲಸವನ್ನು ತೆಗೆದುಕೊಳ್ಳುತ್ತಿದ್ದೇವೆ. ದಾವಣಗೆರೆ ಹತ್ತಿರ ತೆಗೆದುಕೊಂಡಿದ್ದೇವೆ, ಹರಪನಹಳ್ಳಿ ಸೈಡ್ ತೆಗೆದುಕೊಂಡಿದ್ದೇವೆ ಮತ್ತು ಬೇರೆ ಬೇರೆ ಕಡೆಗಳಲ್ಲಿಯೂ ತೆಗೆದುಕೊಳ್ಳುತ್ತೇವೆ. ಹೊಸ ಹೊಸ ಲೈನುಗಳನ್ನು ತೆಗೆದುಕೊಂಡು ಹಾಕುತ್ತಿದ್ದೇವೆ; ಇದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಏಕೆಂದರೆ 60 ಸಾವಿರ ಆದಮೇಲೆ ಇದನ್ನು ಮಾಡುವುದು ಅನಿವಾರ್ಯವಾಗಿದೆ. ಈ ಖರ್ಚನ್ನು ಕೆ.ಇ.ಬಿ.ನವರು ನಿಭಾಯಿಸಲೇಬೇಕು. ಏಪ್ರಿಲ್ ತಿಂಗಳಿಂದ ಬರಗಾಲ ಇರುವುದರಿಂದ ಹೊಸ ಪಂಪುಸೆಟ್ಟುಗಳಿಗೆ ಎನರ್ಜೈಜ್ ಮಾಡಬೇಕು. ಅಂಡರ್‌ಗ್ರೌಂಡ್ ವಾಟರ್ ಟೇಬಲ್ ಗತಿ ಏನಾಗುತ್ತದೆಯೋ ನನಗೆ ಗೊತ್ತಿಲ್ಲ. ಆದರೂ ಕೂಡ ನಿಲ್ಲಿಸುವುದಕ್ಕಾಗುವುದಿಲ್ಲ, ಜನ ಕೇಳುತ್ತಾರೆ. ಕೆಲವು ಕಡೆಗಳಲ್ಲಿ ಅಂದರೆ ನೀರು ಸಿಕ್ಕುವ ಕಡೆಗಳಲ್ಲಾದರೂ ಸದುಪಯೋಗವಾಗಲಿ. ಈ ವಿಚಾರದಲ್ಲಿ ತಾವು ಪೇಳತಕ್ಕಂಥ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಿಕೊಂಡು ಹೋಗುತ್ತೇವೆ.

ಶ್ರೀ ಎ.ಟಿ. ರಾಮಸ್ವಾಮಿ: ಅಧ್ಯಕ್ಷರೇ ಗ್ರಾಮಾಂತರ ಪ್ರದೇಶಗಳಲ್ಲಿ ಈಗ ಎಷ್ಟು ಗಂಟೆ ಲೋಡ್ ಷೆಡ್ಡಿಂಗ್ ಆಗುತ್ತಿದೆ. ಅಷ್ಟು ಗಂಟೆ ಲೋಡ್ ರೆಡ್ಡಿಂಗ್ ಆಗಲಿ. ಅದರ ಬೇರೆ ವೇಳೆಯಲ್ಲಿ ಪದೇ ಪದೇ ಹೋಗುವುದನ್ನು ತಪ್ಪಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ: ನಾನು ಒಪ್ಪುತ್ತೇನೆ. ಲೋಡ್‌ರೆಡ್ಡಿಂಗ್ ಟೈಮ್ ಅಲ್ಲದೆ ಬೇರೆ ಟೈಮಿನಲ್ಲೂ ಹೋಗುತ್ತದೆ ಎಂದು ಹೇಳುತ್ತಿದ್ದಾರೆ. ಇದೂ ಕೂಡ ಗಮನಕ್ಕೆ ಬಂದಿದೆ, ಇದನ್ನು ಸರಿಪಡಿಸುತ್ತೇವೆ.

ಅರಸೀಕೆರೆ ತಾಲ್ಲೂಕಿನ ಗಂಡಸಿ ಹೋಬಳಿಯಲ್ಲಿ ವಿದ್ಯುತ್ ಕೊರತೆ

254 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಸೀಕೆರೆ ತಾಲ್ಲೂಕಿನ ಗಂಡಸಿ ಹೋಬಳಿಯಲ್ಲಿ ವಿದ್ಯುತ್ ಕೊರತೆ ಹೆಚ್ಚಾಗಿ ಕೃಷಿ ಬಾವಿಗಳ ಪಂಪುಸೆಟ್ಟುಗಳು ಹಗಲಿನಲ್ಲಿ ಚಾಲನೆಯಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;

ಇ) ಎಂ.ಯು.ಎಸ್.ಎಸ್.ನ್ನು ಗಂಡಸಿಯಲ್ಲಿ ತೆರೆಯುವುದಾಗಿ ಶಾಸನಸಭೆಯಲಲ್ಲಿ ಸರ್ಕಾರದವರು ಕೊಟ್ಟ ಆಶ್ವಾಸನೆಯ ಪ್ರಗತಿಯೇನು? ಮತ್ತು ಇದು ಯಾವ ಹಂತದಲ್ಲಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ರಾಜ್ಯದಲ್ಲಿ ವಿದ್ಯುತ್ತಿನ ಬೇಡಿಕೆ ತೀವ್ರವಾಗಿ ಏರುತ್ತಿರುವುದರಿಂದ ವಿದ್ಯುತ್ ಬಳಕೆಯನ್ನು ಲಭ್ಯತೆಗೆ ಸರಿಯಾಗಿಸಲು ರಾಜ್ಯಾದ್ಯಂತ ಗ್ರಾಮಾಂತರ ಪ್ರದೇಶದಲ್ಲಿ ದಿನವಹಿ ಆರು ಗಂಟೆಗಳ ಕಾಲ ಮಾತ್ರ ನಿಯಮಿತ ಲೋಡ್‌ರೆಡ್ಡಿಂಗ್ ಮಾಡಲಾಗುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಇದು ಅನಿವಾರ್ಯ ಇದೇ ಪ್ರಕಾರ ಅರಸೀಕೆರೆ ತಾಲ್ಲೂಕು ಗಂಡಸಿ ಹೋಬಳಿಯಲ್ಲೂ ಸಹ ಈ ನಿಯಮಿತ ಲೋಡ್ ಷೆಡ್ಡಿಂಗ್‌ನ್ನು ಮಾಡಲಾಗುತ್ತಿದೆ.

ಆ) ಹಾಲಿ ನಿರ್ವಹಿಸುತ್ತಿರುವ ನಿಯಮಿತ ಲೋಡ್ ಷೆಡ್ಡಿಂಗ್ ಅನಿವಾರ್ಯವಾಗಿದೆ.

ಇ) ಗಂಡಸಿಯಲ್ಲಿ ಒಂದು 110.11 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಪರಿಶೀಲನೆ ನಡೆಸಿದ್ದು, ಸಂಬಂಧಪಟ್ಟ ಟ್ರಾನ್ಸ್‌ಮಿಷನ್ ಲೈನ್ ಓವರ್ ಲೋಡ್ ಆಗಿರುವುದರಿಂದ, ಸದ್ಯಕ್ಕೆ ಇದು ಸಾಧ್ಯವಾಗುವುದಿಲ್ಲವೆಂದು ನಿರ್ಧರಿಸಲಾಗಿದೆ. ಆದರೆ ತುಮಕೂರು ಮತ್ತು ತಿಪಟೂರುಗಳಲ್ಲಿ ತಲಾ ಒಂದು 220 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಉದ್ದೇಶವಿದ್ದು, ಇದಾದ ನಂತರ ಗಂಡಸಿಯಲ್ಲಿ ಉಪ ಕೇಂದ್ರವನ್ನು ಸ್ಥಾಪಿಸುವ ವಿಷಯವನ್ನು ಮರು ಪರಿಶೀಲಿಸಲಾಗುವುದು.

ಶ್ರೀ ಬಿ. ಶಿವರಾಮು : ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರದಲ್ಲಿ 6 ಗಂಟೆಗಳ ಕಾಲ ಲೋಡ್‌ಶೆಡ್ಡಿಂಗ್ ಇರುತ್ತದೆಂದು ಕೊಟ್ಟಿದ್ದಾರೆ. ಮತ್ತು ಈಗಾಗಲೇ ಮುಖ್ಯಮಂತ್ರಿಗಳು ಉತ್ತರ ಕೂಡ ಹೇಳಿದ್ದಾರೆ. ಆದರೆ 6 ಗಂಟೆ ಅಲ್ಲ, 8 ಗಂಟೆ ಮಾಡಿ, ಆ ಟೈಮಿನಲ್ಲಿ ಕರೆಂಟ್ ಇಲ್ಲದಿದ್ದರೆ ಸಂತೋಷ. ಉಳಿದ ಕಾಲದಲ್ಲಾದರೂ ನಮ್ಮ ನಿರೀಕ್ಷೆಗೆ ತಕ್ಕಂತೆ ಕರೆಂಟ್ ಕೊಟ್ಟರೆ ಸಾಕಾಗುತ್ತದೆ. ನನ್ನ ಗಂಡಸಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ, ಎರಡು ಹೋಬಳಿ ಪ್ರದೇಶಗಳಿಗೆ ಸೇರಿದಹಾಗೆ ನಾನು ಈ ಪ್ರಶ್ನೆ ಕೇಳಿದ್ದೇನೆ. ಅಲ್ಲಿ ವೋಲ್ಟೇಜ್ ಇಲ್ಲವೆಂದು ಹಿಂದಿನ ಸದನದಲ್ಲೂ ಸಂಬಂದಪಟ್ಟ ಮಂತ್ರಿಗಳ ಗಮನಕ್ಕೆ ತಂದಿದ್ದೆ. ಆಗ ಅವರು ಗಂಡಸಿಯಲ್ಲಿ ಎಂ.ಇ.ಎಸ್. ಸೆಂಟರ್ ಮಾಡುತ್ತೇವೆಂದೂ ಹೇಳಿದರು. ಆದರೆ ಆ ಉತ್ತರದಲ್ಲಿ ಅದು ಆಗುವುದಿಲ್ಲ. ಏನೇನೋ ಸಮಸ್ಯೆ ಇದೆ ಬಹುಶಃ ತುಮಕೂರು ಮತ್ತು ತಿಪಟೂರು ಕೇಂದ್ರಗಳಲ್ಲಿ 220 ಕೆ.ವಿ. ಉಪಕೇಂದ್ರ ಮಾಡಿದ ನಂತರ, ನಿಮ್ಮಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ನಮ್ಮಲ್ಲಿ ಒಂದು ಸಾವಿರ ಪಂಪುಸೆಟ್ಟುಗಳಿವೆ. ಅವುಗಳಿಗೆ ಹಗಲಿನಲ್ಲಿ 18 ಗಂಟೆಗಳ ಕಾಲ ಕರೆಂಟ್ ಸಿಕ್ಕುವುದಿಲ್ಲ. ಒಂದು ವೇಳೆ ಕರೆಂಟ್ ಇದ್ದರೂ ಲೋ ವೋಲ್ಟೇಜ್ ಇರುತ್ತದೆ. 100 ಪರ್ಸೆಂಟ್ ಇರಬೇಕೆಂದು ಏನಿದೆ, ಅದರಲ್ಲಿ 25 ಪರ್ಸೆಂಟ್ ಕೂಡ ಇರುವುದಿಲ್ಲ. ಪಂಪುಸೆಟ್ ರನ್ ಮಾಡುವುದಕ್ಕಾಗುವುದಿಲ್ಲ. ರಾತ್ರಿ ಹೊತ್ತು 6 ಗಂಟೆಗಳ ಕಾಲ ಮಾತ್ರ ರನ್ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ. ಈಗ ಈ ಸಮಸ್ಯೆ ಹೇಗೆ ಬಗೆಹರಿಯುತ್ತದೆ? ಈಗ ಮಾನ್ಯ ಮುಖ್ಯಮಂತ್ರಿಗಳು 60 ಸಾವಿರ ಬೋರ್‌ವೆಲ್ಸ್‌ನಲ್ಲಿ ಎಲ್ಲರಿಗೂ ಸರ್ವೀಸ್ ಕೊಡುತ್ತೇವೆಂದು ಹೇಳಿದ್ದಾರೆ. ಇದರಿಂದ ಈ ಎರಡು ಹೋಬಳಿಗಳ 300-400 ಪಂಪ್‌ಸೆಟ್ಟುಗಳಿಗೆ ಈಗ ಸರ್ವೀಸ್ ಕೊಡತಕ್ಕ ವ್ಯವಸ್ಥೆಯಾಗುತ್ತದೆ. ಹಾಲಿ ಇರತಕ್ಕ ಬಾವಿಗಳಿಗೆ ಸಾಕಾಗುವಷ್ಟು ವೋಲ್ಟೇಜ್ ಇಲ್ಲವೆಂದರೆ, ಮತ್ತೆ ಕೊಡತಕ್ಕ ಬಾವಿಗಳ ಪರಿಸ್ಥಿತಿ ಏನು, ರೈತರ ಕಷ್ಟ ಏನು, ಇದನ್ನು ಹೇಗೆ ಬಗೆಹರಿಸುತ್ತೀರಿ. ಈ ಎರಡು ಹೋಬಳಿಗೆ ಸೀಮಿತವಾಗಿ ಮಂತ್ರಿಗಳಿಂದ ನಾನು ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾಧ್ಯಕ್ಷರೇ, ಎಲ್ಲಿ ಲೋಡ್ ಜಾಸ್ತಿ ಇರುತ್ತದೆ ಅಲ್ಲಿ ಉಪ ಕೇಂದ್ರ ಸ್ಥಾಪನೆ ಮಾಡುವುದು, ಪೆಚ್ಚಿನದಾಗಿ 66, 220 ಕೆ.ವಿ. ಲೈನ್ ಮಾಡತಕ್ಕಂಥ ಪ್ರಶ್ನೆ, ಇವೆಲ್ಲವೂ ಉದ್ಭವವಾಗುತ್ತದೆ. ನಿಜವಾಗಿಯೂ ಬರಗಾಲ ಬಿದ್ದಿರತಕ್ಕ ಪ್ರದೇಶದಲ್ಲಿ ನನಗೆ ಗೊತ್ತಿರುವ ಹಾಗೆ, ತುಂಬಾ ಕೆಟ್ಟ ವಾತಾವರಣ ಉಂಟಾಗಿದೆ. ಇದನ್ನು ಯೋಚನೆ ಮಾಡಿದಾಗ ಟ್ರಾನ್ಸ್‌ಮಿಷನ್ ಲೈನ್ ಓವರ್ ಲೋಡ್ ಅಲ್ಲಿ ಆಗಿದೆ. ಇದು ತಮಗೂ ಗೊತ್ತಿದೆ. ತುಮಕೂರು ಮತ್ತು ತಿಪಟೂರುಗಳಲ್ಲಿ ತಲಾ 220 ಕೆ.ವಿ.ಯ ವಿದ್ಯುತ್ ಉಪ ಕೇಂದ್ರ ಸ್ಥಾಪನೆ ಮಾಡತಕ್ಕಂಥ ಉದ್ದೇಶವನ್ನು ನಾವು ಇಟ್ಟುಕೊಂಡಿದ್ದೇವೆ. ಇದಾದ ಮೇಲೆ ಗಂಡಸಿಯಲ್ಲಿ ಉಪ ಕೇಂದ್ರ ಮಾಡಿಕೊಂಡರೆ ಆಗ ನಿಮ್ಮ ಪರಿಸ್ಥಿತಿ ಸುಧಾರಿಸುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲಿಯವರೆಗೂ ಸುಧಾರಿಸುವ ಅವಕಾಶ ಬಹಳ ಕಡಿಮೆ ಇದೆ. That is why we are concentrating on this Tumkur and Tiptur 220 KVA lines. ಇದು

ಆಗಲಿ. ಅಲ್ಲಿಯವರೆಗೂ ನಿಮಗೆ ಉಪಯೋಗವಾಗುವುದಿಲ್ಲ. ಇದಾದ ಮೇಲೆ ನಿಮಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ನಾವೂ ಕೂಡ ಸೀರಿಯಸ್ ಆಗಿದ್ದೇವೆ.

ಶ್ರೀ ಬಿ. ಶಿವರಾಮು: ಪ್ರಮುಖವಾಗಿ ಈ ಉಪಕೇಂದ್ರಗಳು ಯಾವಾಗ ಆಗುತ್ತದೆ, ಇದು ಆಗದೇ ಹೋದರೆ ರೈತರ ಸಮಸ್ಯೆ ಬಗೆಹರಿಸುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ಅವರಡೂ ಮುಗಿದಮೇಲೆ ಇದು ಎಂದು ಹೇಳಿದ್ದಾರೆ.

ಶ್ರೀ ಬಿ. ಶಿವರಾಮು: ಅವು ಮುಗಿಯುವುದು ಯಾವಾಗ ಎನ್ನುವುದು ಬೇಕಾಗಿದೆ. ನೀವು 60 ಸಾವಿರ ಬೋರ್‌ವೆಲ್ಸ್‌ಗೆ ಸರ್ವೀಸ್ ಕೊಡುತ್ತೇವೆಂದು ಹೇಳಿ, ಅದನ್ನು ಉಪಯೋಗಿಸುವುದಕ್ಕೇ ಆಗದಿದ್ದರೆ ರೈತರಿಗೆ ಉಪಯೋಗ ಏನಾಗುತ್ತದೆ? ನಮ್ಮಲ್ಲಿ 1200 ಬೋರ್‌ವೆಲ್ಸ್ ಇದೆ. ಬೇರೆ ನೀರಾವರಿ ವ್ಯವಸ್ಥೆ ಇಲ್ಲ. ಆ ಬೋರ್‌ವೆಲ್ಸ್ ಉಪಯೋಗ ಮಾಡಿಕೊಳ್ಳಲು ಸರ್ವೀಸ್ ಕೊಟ್ಟಿದ್ದೀರಿ. ಆದರೆ ಉಪಯೋಗ ಇಲ್ಲದಿರತಕ್ಕಂಥ ಸರ್ವೀಸ್‌ನಿಂದ ಏನು ಪ್ರಯೋಜನ. ಈ ರೀತಿ ಸರ್ವೀಸ್‌ನಿಂದ ಏನು ಉಪಯೋಗ. ಆದುದರಿಂದ ಇದನ್ನು ಎಷ್ಟು ದಿವಸದಲ್ಲಿ ಮಾಡುವುದಕ್ಕೆ ಆಗುತ್ತದೆ ಎಂಬುದು ಪ್ರಮುಖವಾದುದು. ಅದಕ್ಕೋಸ್ಕರ ಈ ಪ್ರಶ್ನೆ ಕೇಳುತ್ತಿದ್ದೇನೆಯೇ ಹೊರತು ಬೇರೇನೂ ಇಲ್ಲ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಇಷ್ಟು ದಿವಸದ ಒಳಗೆ ಮಾಡುತ್ತೇವೆಂದು ಒಂದು ಕಮಿಟ್‌ಮೆಂಟ್ ಹೇಳಿದರೆ, ಆಶ್ವಾಸನೆ ಕೊಟ್ಟರೆ, ಬಹುಶಃ ನಮ್ಮ ಕ್ಷೇತ್ರದ ಜನತೆಗೆ ಮುಖ್ಯಮಂತ್ರಿಗಳ ಉತ್ತರದಿಂದ ಸಂತೋಷವಾಗುತ್ತದೆ ಎಂದು ನಾನು ನಂಬುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ: ನಿಜವಾಗಿ ಇಲ್ಲಿರತಕ್ಕಂಥ ಪ್ರಶ್ನೆ ಇದು. ನಾವು ಈಗ ವರ್ಲ್ಡ್ ಬ್ಯಾಂಕ್ ಏಯ್ಡ್ ತೆಗೆದುಕೊಂಡು ತಿಪಟೂರು-ತುಮಕೂರು ಲೈನನ್ನು ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡಿದ್ದೇವೆ. I think, we will take certain decision on this very shortly. ಮೊದಲು ಮಾತನಾಡಿ ಕೊನೆಗೆ ಇಲ್ಲ ಎಂದು ಹೇಳಿದರೆ ಅಥವಾ ಆಗದಿದ್ದರೆ ಸರಿ ಹೋಗುವುದಿಲ್ಲ. actually I am now just withholding my answer to your question, ಆದ್ದರಿಂದ ತಾವು ಆಶಾಭಾವನೆಯನ್ನು ಇಟ್ಟುಕೊಳ್ಳಬಹುದು, ಅಷ್ಟು ಸಾಕು ಎಂದು ನನಗನ್ನಿಸುತ್ತದೆ.

ಶ್ರೀ ಎಂ. ಮಹದೇವ್: ಮಾನ್ಯ ಮುಖ್ಯಮಂತ್ರಿಗಳು ಎಲೆಕ್ಟ್ರಿಸಿಟಿ ಇಂಪ್ರೂವ್‌ಮೆಂಟ್ ಮಾಡಲಿ, ಅದರೆ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಪ್ರಮುಖವಾದ ಸಮಸ್ಯೆ ಇದೆ. ಸಂಜೆ 6 ಘಂಟೆಯಿಂದ 7 ಘಂಟೆಯ ವೇಳೆಯಲ್ಲಿ ಸಾಮಾನ್ಯವಾಗಿ ರೈತರುಗಳು ಹೊಲದಿಂದ ಬರುತ್ತಾರೆ, ಬಸ್‌ನಿಂದ ಬರುತ್ತಾರೆ. ಅವರಿಗೆ ಕೆಲಸ ಇರುವುದೆಲ್ಲಾ 6ರಿಂದ 7 ಘಂಟೆಯವರೆಗೆ. ಆಮೇಲೆ ಅವರು 8 ಘಂಟೆಯೊಳಗಾಗಿ ಊಟ ಮಾಡಿ ಮಲಗುತ್ತಾರೆ. ಇಂತಹ ಟೈಮ್‌ನಲ್ಲೇ ಎಲೆಕ್ಟ್ರಿಸಿಟಿ ಹೋದರೆ ಅವರಿಗೆ ಎಷ್ಟು ತೊಂದರೆಯಾಗುತ್ತದೆ. ಇದು ಸರಕಾರದ ಗಮನಕ್ಕೆ ಬಂದಿದೆಯೇ? ನಮ್ಮ ಕಡೆ ಏನಾಗಿದೆಯೆಂದರೆ ಸಾಯಂಕಾಲ 6 ಘಂಟೆಯಿಂದ 7 ಘಂಟೆಯ ವೇಳೆಯಲ್ಲಿ ರೈತ ಹೊಲದಿಂದ ಬರುತ್ತಾನೆ. ನಮ್ಮ ಕಡೆ ಆನೆಯ ಕಾಟ ಜೋರಿ ಇದೆ. ಆ ಸಮಯದಲ್ಲಿ ಹೊಲದಿಂದ ಬರುವಾಗ ಲೈಟ್ ಇಲ್ಲದ ಕಾರಣ ಹೊಲದಿಂದ ಬರುವುದು ಕಷ್ಟವಾಗುತ್ತದೆ. ಎಲ್ಲಾದರೂ ಒಂದು ಮೆದೆ ಕಂಡರೂ ಅದನ್ನು ಆನೆ ಎಂದು ತಿಳಿದುಕೊಳ್ಳುವ ಸಂಭವ ಇದೆ. ಅದು ಆನೆ ಕಂಡ ಹಾಗೆ ಕಾಣುತ್ತದೆ. ಆದುದರಿಂದ ಆ ಟೈಮಿನ ಒಳಗೆ ಏನಾದರೂ ಬದಲಾವಣೆ ಮಾಡಿ ರಾತ್ರಿ ಎಂಟು ಅಥವಾ ಒಂಭತ್ತು ಘಂಟೆಯ ಮೇಲಾದರೂ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ: ಕಾಲದ ವಿಚಾರದಲ್ಲಿ ಅಭಿಪ್ರಾಯ ಬಹಳ ಭಿನ್ನವಾಗಿದೆ. ಮಹದೇವ್‌ರವರ ಅಭಿಪ್ರಾಯ ಒಂದಾದರೆ, ಇನ್ನು ಕೆಲವರು ಮತ್ತೊಂದು ಅಭಿಪ್ರಾಯ ಕೂಡಾ ಕೊಟ್ಟಿದ್ದಾರೆ. ಇದರಲ್ಲಿ ಬರೀ ಎರಡು ಅಭಿಪ್ರಾಯಗಳು ಇಲ್ಲ, 4-6-10 ಅಭಿಪ್ರಾಯಗಳು ಇವೆ. ಇದರ ಬಗ್ಗೆ ತೀರ್ಮಾನ ಮಾಡುವುದೂ ಕೂಡಾ ಬಹಳಷ್ಟು ಇದೆ. ಈಗೇನು ಮಾಡಿದ್ದೇವೆ ಇದೇ ರೀತಿ ಮಾಡುತ್ತಾ ಹೋಗೋಣ. ಬದಲಾವಣೆ ಅನಿವಾರ್ಯ ಎಂದು ಕಂಡು ಬಂದರೆ ಬದಲಾವಣೆ ಮಾಡುವುದಕ್ಕೆ ನಾವು ಸಿದ್ದರಿದ್ದೇವೆ. ನಿಮ್ಮ ಸಲಹೆಯನ್ನು ನಾವು ಗಮನದಲ್ಲಿ ಇಟ್ಟುಕೊಂಡಿರುತ್ತೇವೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ಸನ್ಮಾನ್ಯ ಸಭಾಧ್ಯಕ್ಷರೇ, ವಿದ್ಯುತ್ ಕಡಿತದ ಬಗ್ಗೆ ಮಾತನಾಡುತ್ತಾ ಬಹಳ ಜನ ಸದಸ್ಯರು ಐ.ಪಿ. ಸೆಟ್ಸ್ ಬಗ್ಗೆಯೇ ಮಾತನಾಡುತ್ತಿದ್ದಾರೆ. ಅದರೆ ಇದಕ್ಕಿಂತ ದೊಡ್ಡ ಸಮಸ್ಯೆ ರೈತ ಮಹಿಳೆಯರದ್ದು. ಗ್ರಾಮಾಂತರ ಪ್ರದೇಶಗಳಲ್ಲಿರುವ ಮಹಿಳೆಯರದ್ದು. ಎಲ್ಲಾ ಗ್ರಾಮದಲ್ಲೂ ಮಿನಿ ವಾಟರ್ ಸಪ್ಲೈಸ್ಕೀಮ್ ಎಂದು ಹಾಕಿದಮೇಲೆ ಕೈಪಂಪುಗಳ ಬಗ್ಗೆ ನಾವು ಗಮನಹರಿಸಿಲ್ಲ. ಬೆಳಗ್ಗೆ 6 ಘಂಟೆಯಿಂದ 12 ಘಂಟೆಯವರೆಗೆ ತಾವು ವಿದ್ಯುತ್ ಕಡಿತ ಮಾಡಿದರೆ ನಮ್ಮ ಗ್ರಾಮಾಂತರ ಮಹಿಳೆಯರು 12 ಘಂಟೆಯ ಮೇಲೆ ಅವರ ದಿನಚರಿಯನ್ನು ಪ್ರಾರಂಭ ಮಾಡಬೇಕಾಗುತ್ತದೆ. ಇದು ಬಹಳ ದೊಡ್ಡ ಸಮಸ್ಯೆ. ಇದರ ಬಗ್ಗೆ ಖಾಸಗಿಯಾಗಿ ನಾನು ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೆ. ಗ್ರಾಮಾಂತರ ಪ್ರದೇಶದ ವಿದ್ಯುತ್ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಒಂದು ಸಲಹೆ ಮಾಡಿದ್ದೆ. ಅದರ ಬಗ್ಗೆ ಏಕೋ ಅವರು ಇವತ್ತು ಇನ್ನೂ ಏನೂ ಯೋಚನೆ ಮಾಡದಹಾಗೆ ಕಾಣಲಿಲ್ಲ. ಫೈಟಿನ್‌ಷನ್ ಬಳಕೆದಾರರು ಏನಿದ್ದಾರೆ ಅವರು ಬಳಸುತ್ತಿರುವ ವಿದ್ಯುತ್‌ನಲ್ಲಿ ಶೇಕಡ 5 ರಷ್ಟು ಕಡಿತ ಮಾಡಿ, ಇಲ್ಲವೇ ಅವರು ಕಳುವು ಮಾಡುತ್ತಾ ಇರುವುದರಲ್ಲಿ 5 ಪರ್ಸೆಂಟ್‌ಪತ್ತೆ ಮಾಡಿ. ಇವೆರಡರಲ್ಲಿ ಒಂದು ಮಾಡಿದರೆ ಗ್ರಾಮಾಂತರ ಪ್ರದೇಶದ ವಿದ್ಯುತ್ ಸಮಸ್ಯೆ ಪೂರ್ತಿ ಬಗೆ ಹರಿಯುತ್ತದೆ. ಇದರ ಬಗ್ಗೆ ತಾವು ಆಲೋಚನೆ ಮಾಡಬೇಕು. ಈ ವಿದ್ಯುತ್ ಕಡಿತದ ಬಗ್ಗೆ ಒಂದು ಆಶ್ವಾಸನೆ ಕೊಟ್ಟರೆ ನಮ್ಮ ಹಳ್ಳಿಗಳಿಗೆ ಏನೋ ಹೇಳುತ್ತೀರಲ್ಲ ಪದೇ ಪದೇ ದಿವಸಕ್ಕೆ 20 ಸಲ ಆರಿ ಹೋಗುವ ವಿದ್ಯುತ್ ದೀಪ ಇದೆಯಲ್ಲ, ಇದಕ್ಕೆ ತಮ್ಮ ಸರಕಾರ ಭಾಗ್ಯ ಜ್ಯೋತಿ ಎಂದು ಕರೆಯುತ್ತಿದೆ. ದಿವಸಕ್ಕೆ 20 ಸಲ ಕೆಡುವುದಕ್ಕೆ ಭಾಗ್ಯ ಜ್ಯೋತಿ ಎಂದು ಹೆಸರು ಈ ಸರಕಾರ ಕೊಟ್ಟರುವುದು, ಇದನ್ನು ತಪ್ಪಿಸಿದ ಹಾಗೆ ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಪ್ರೊಫೆಸರ್ ನಂಜುಂಡಸ್ವಾಮಿಯವರು ಎರಡು ಸಲಹೆಗಳನ್ನು ಕೊಟ್ಟಿದ್ದಾರೆ. ಫೈಟಿನ್‌ಷನ್ ಬಳಕೆದಾರರಿಗೆ ನೀವು ಏನು ವಿದ್ಯುತ್ ಸರಬರಾಜು ಮಾಡುತ್ತಿದ್ದೀರಿ ಅದರಲ್ಲಿ ಸ್ವಲ್ಪ ಕಡಿತ ಮಾಡಬೇಕು ಎನ್ನುವುದು ಒಂದನೆ ಸಲಹೆ. ಮತ್ತೊಂದು ಸಲಹೆ ಏನೆಂದರೆ ಇರತಕ್ಕಂಥ ವಿದ್ಯುತ್‌ನಲ್ಲಿ ಕಳ್ಳತನ ಮಾಡುವುದು ಏನು ಇದೆ ಅದನ್ನು ನಿಲ್ಲಿಸಬೇಕು ಎನ್ನುವುದು. ಈ ಎರಡು ವಿಚಾರಗಳನ್ನು ಅವರು ಹೇಳಿದ್ದಾರೆ. ಈ ವಿಚಾರದ ಬಗ್ಗೆ ನಾವು ಹಿಂದೆ ಕೂಡ ಚರ್ಚೆ ಮಾಡಿದ್ದೇವೆ. ವಿದ್ಯುತ್ ಕಳ್ಳತನ ಮಾಡುವುದರ ಬಗ್ಗೆ ನಾನು ಹೇಳುವುದಾದರೆ, ಈ ಬಗ್ಗೆ ಸಾಕಷ್ಟು ಕಂಪ್ಲೇಂಟ್ಸ್ ಸದಾಕಾಲ ಬರುತ್ತಲೇ ಇವೆ. ಈ ಪ್ರಶ್ನೆಗೆ ನಾನು ಈಗಾಗಲೇ ಉತ್ತರ ಹೇಳಿದ್ದೇನೆ. ಈಗ ಅದನ್ನು ಸರಿ ಮಾಡತಕ್ಕಂಥ ವಿಚಾರದಲ್ಲಿ ಈಗಾಗಲೇ ಅಧಿಕಾರಿಗಳ ಮಟ್ಟದಲ್ಲಿ ಒಂದು ಸಭೆ ಕರೆದು ಆ ಸಭೆಯಲ್ಲಿ ಸೂಕ್ತವಾದ ಆದೇಶಗಳನ್ನು ಕೊಟ್ಟಿದ್ದೇವೆ. ವಿದ್ಯುತ್ ಕಳ್ಳತನವಾಗದ ಹಾಗೆ ಚೆಕ್‌ಮಾಡುವುದು, ಕ್ರಾಸ್ ಚೆಕ್ ಮಾಡುವುದು ಸೂಪರ್‌ವೈಸ್ ಮಾಡತಕ್ಕಂಥಾದ್ದು ಮತ್ತು ಸರ್‌ಪ್ರೈಜ್ ವಿಜಿಟ್ಸ್ ಮಾಡುವುದು ಈ ರೀತಿ ಹೆಚ್ಚು ಕೆಲಸ ಮಾಡದಿದ್ದರೆ ನಮಗೆ ಬಹಳ ಕಷ್ಟವಾಗುತ್ತದೆ. ನಾವು ಇದರ ಬಗ್ಗೆ ಕಾರ್ಯಕ್ರಮ ಹಾಕುತ್ತೇವೆ.

ಯಾವ ರೀತಿಯಲ್ಲಿ ಹಾಕಿಕೊಳ್ಳುತ್ತೇವೆ, ಎಷ್ಟು ಪ್ರಮಾಣದಲ್ಲಿ ಹಾಕಿಕೊಳ್ಳುತ್ತೇವೆ ಎನ್ನುವುದನ್ನು ನಾನು ಈಗಲೆ ಹೇಳಲಾರೆ. It has acquired a very big dimension, according to me. ಆದ್ದರಿಂದ ವಿವರಗಳಿಗೆ ಹೋಗದೆ ಈ ವಿಚಾರದಲ್ಲಿ ಗಮನ ಕೊಟ್ಟು ದೊಡ್ಡ ಪ್ರಮಾಣದಲ್ಲಿ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಅದನ್ನು ಹಾಗೆ ಬಿಟ್ಟರೆ ಆಗುವುದಿಲ್ಲ. ಇನ್ನು ಪೈಟಿನ್‌ಷನ್ ಬಳಕೆದಾರರ ಬಗ್ಗೆ ಹೇಳುವುದಾದರೆ, ಅವರಿಗೆ ಕೊಡುತ್ತಿರುವ ವಿದ್ಯುತ್ ಸರಬರಾಜಿನಲ್ಲಿ ಕಡಿತ ಮಾಡುವ ಬಗ್ಗೆ ತಾವು ಸಲಹೆ ಮಾಡಿದ್ದೀರಿ. ಈಗ ವಿದ್ಯುತ್ ಕಟ್ ಅನ್ನು ಅನಿವಾರ್ಯವಾಗಿ ಎಲ್ಲಾ ಕಡೆ ನಾವು ಅಪ್ಲೈ ಮಾಡುತ್ತಿದ್ದೇವೆ. ಇವತ್ತು ರೈತರಿಗೆ ವಿದ್ಯುತ್ ಕಟ್ ಮಾಡಿದರೆ ಅವರು ಬೆಳೆಯುವಂತಹ ಆಹಾರ ಪದಾರ್ಥಗಳ ಉತ್ಪಾದನೆಯಲ್ಲಿ ನಮಗೆ ಪೆಟ್ಟು ಬೀಳುತ್ತದೆ. ಈ ಕಡೆ ಇಂಡಸ್ಟ್ರಿಗಳಿಗೆ ವಿದ್ಯುತ್ ಕಟ್ ಮಾಡಿದರೆ ನಮಗೆ ಪೆಟ್ಟು ಬೀಳುತ್ತದೆ. ಏನೇ ಆದರೂ ವಿದ್ಯುತ್ ಕಟ್ ಮಾಡತಕ್ಕಂಥಾದ್ದು ಅನಿವಾರ್ಯ. ಲೋಡ್ ಜಾಸ್ತಿಯಾದರೆ ಒಂದು ಕಡೆ ಕಟ್ ಮಾಡುವುದು ಮತ್ತೊಂದು ಕಡೆ ಪವರ್ ಕಡಿಮೆ ಇದೆ ಎಂಬ ಕಾರಣದಿಂದ ವಿದ್ಯುತ್‌ಕಟ್ ಮಾಡಬೇಕಾಗುತ್ತದೆ. ತಮ್ಮ ಸಲಹೆಗಳನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ. ಎಷ್ಟು ಕಟ್ ಮಾಡುತ್ತೇವೆ ಎನ್ನುವುದನ್ನು ಈಗಲೆ ನಾನು ಹೇಳಲಾರೆ. ಇಷ್ಟೇ ನನ್ನ ಉತ್ತರ.

ಪ್ರೊ ಎಂ.ಡಿ. ನಂಜುಂಡಸ್ವಾಮಿ: ಎಷ್ಟು ವಿದ್ಯುತ್ ಕಟ್ ಮಾಡಬೇಕೆನ್ನುವುದನ್ನು ನಿಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಿ ಅದು ಬೇರೆ ವಿಚಾರ. ಆದರೆ ಒಂದು ವಿಚಾರವನ್ನು ತಾವು ಮನಸ್ಸಿನಲ್ಲಿಟ್ಟು ಕೊಳ್ಳಬೇಕು. ಶೇಕಡ 75 ಭಾಗ ನಮ್ಮ ತಾಯಂದಿರಿಗೆ ನೇರವಾಗಿ ಸಂಬಂಧಪಟ್ಟ ಸಮಸ್ಯೆ. ಅವರ ದಿನಚರಿಯಲ್ಲಿ ಏನು ತೊಂದರೆಗಳು ಆಗುತ್ತಿವೆ ಅದನ್ನು ತಪ್ಪಿಸುವುದನ್ನು ತಮ್ಮ ಗಮನದಲ್ಲಿಟ್ಟುಕೊಂಡರೆ ಸಾಕು.

ಶ್ರೀ ಎಸ್. ಬಂಗಾರಪ್ಪ: ಮಿನಿವಾಟರ್ ಸಪ್ಲೈ ಸ್ಕೀಮ್‌ನಲ್ಲಿ ವಿದ್ಯುತ್ ಕಡಿತ ಮಾಡಿದರೆ 6 ಗಂಟೆಯಿಂದ 12 ಗಂಟೆಯವರೆಗೆ ತೊಂದರೆಯಾಗುತ್ತದೆ. ಆ ಸಮಯದಲ್ಲಿ ಅವರಿಗೆ ನೀರು ಸಿಗದೆ 12 ಗಂಟೆ ಆದ ಮೇಲೆ ಅವರ ದಿನಚರಿ ಪ್ರಾರಂಭವಾಗುತ್ತದೆ. ಇದು ಅವರಿಗೆ ಸಮಸ್ಯೆ ಆಗಿದೆ. ಇದನ್ನು ಸಹ ನಾವು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮ ಕೂಡ ಹಾಕಿಕೊಳ್ಳಬೇಕಾಗುತ್ತದೆ.

ಮುಂಬೈ ಕರ್ನಾಟಕ ಪ್ರದೇಶದ ಅಭಿವೃದ್ಧಿ ಬಗ್ಗೆ

277 - ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕರ್ನಾಟಕ ಅಭಿವೃದ್ಧಿ ಬಗ್ಗೆ ಸರ್ಕಾರ ನಿರ್ಲಕ್ಷಣೆ ತೋರಿಸುತ್ತಿರುವ ಸಂಗತಿ ನಿಜವೇ?

ಆ) ಸರ್ಕಾರದವರು ಹೈದರಾಬಾದ್ ಮಂಡಳಿ ಅಭಿವೃದ್ಧಿ ನೇಮಿಸಿ ಅಭಿವೃದ್ಧಿ ಮಾಡುತ್ತಿರುವಂತೆ ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಳಿ ನೇಮಿಸಿ, ಮುಂಬೈ ಕರ್ನಾಟಕ ಪ್ರದೇಶ ಅಭಿವೃದ್ಧಿಪಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ನಿಜವಲ್ಲ

ಆ) ಇಂತಹ ಯಾವುದೇ ಪ್ರಸ್ತಾವನೆಯು ಸರ್ಕಾರದ ಪರಿಗಣನೆಯಲ್ಲಿ ಇರುವುದಿಲ್ಲ.

ಶ್ರೀ ಎಸ್.ಎಚ್. ಕೌಜಲಗಿ: ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಯಲ್ಲಿ "ಉತ್ತರ ಕರ್ನಾಟಕ ಅಭಿವೃದ್ಧಿ ಬಗ್ಗೆ ಸರ್ಕಾರ ನಿರ್ಲಕ್ಷಣೆ ತೋರಿಸುತ್ತಿರುವ ಸಂಗತಿ ನಿಜವೇ" ಎಂದು ಕೇಳಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರದಲ್ಲಿ ನಿಜವಲ್ಲವೆಂದು ಹೇಳಿದ್ದಾರೆ.